# ತೆಂಗಿನ ಗರಿಯ ರಥ

ಸಾಮಾನ್ಯವಾಗಿ ಕಲ್ಲಿನ ರಥ, ಚಿನ್ನದ ರಥ ಹಾಗೂ ಬೆಳ್ಳಿಯ ರಥಗಳನ್ನು ನೋಡಿದ್ದೇವೆ. ಆದರೆ ತೆಂಗಿನ ಗರಿಯ ರಥವನ್ನು ಎಲ್ಲಿಯಾದರೂ ನೋಡಿದ್ದೀರಾ? ಉತ್ತರ ಕರ್ನಾಟಕದ ಬಾದಾಮಿ ತಾಲ್ಲೂಕಿನಲ್ಲಿರುವ ಮಂಗಳಗುಡ್ಡ ಎಂಬ ಪುಟ್ಟ ಹಳ್ಳಿಯಲ್ಲಿ ಈ ಇದನ್ನು ಕಾಣಬಹುದು. ಗ್ರಾಮ ದೇವತೆಯಾದ ಮಂಗಳಾ ದೇವಿಯ ದೇವಸ್ಥಾನದ ಆವರಣದಲ್ಲಿ ಕಾಣುವ ಈ ರಥವು ತೆಂಗಿನ ಗರಿಗಳಿಂದ ಮಾಡಲಾಗಿದ್ದು, ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಊರಿನ ಜನರು ಮಂಗಳಾ ದೇವಿಯ ಜಾತ್ರೆಯನ್ನು ಆಚರಿಸಿ ರಥೋತ್ಸವ ಮಾಡುತ್ತಾರೆ. ಈ ಜಾತ್ರೆಯಲ್ಲಿ ಸುತ್ತಮುತ್ತಲ ಸುಮಾರು ಹನ್ನೆರಡು ಗ್ರಾಮದ ಜನರು ಪಾಲ್ಗೊಳ್ಳುತ್ತಾರೆ.

–ಸಂಜ್ಞಾ ಭಟ್, ಶಿರಸಿ





# ಪ್ಯಾಪಿರಸ್ ಮೇಲೆ ಈಜಿಪ್ಟ್ ಚಿತ್ರಕಲೆ

‘ಪ್ಯಾಪಿರಸ್’, ಈಜಿಪ್ಟ್ ದೇಶದ ನೈಲ್ ನದಿಯ ದಡದಲ್ಲಿ ಬೆಳೆಯುವ ಒಂದು ಹೂವಿನ ಗಿಡ. ಈ ಗಿಡದಿಂದ ತಯಾರಿಸಲಾದ ದಪ್ಪ ಹಾಳೆಯನ್ನು ‘ಪ್ಯಾಪಿರಸ್’ ಅಂತಲೇ ಕರೆಯಲಾಗುತ್ತದೆ. ಮುದ್ರಣ ಕಾಗದ ಆವಿಷ್ಕಾರಗೊಳ್ಳುವ ಮುನ್ನ ಇದೇ ಹಾಳೆಯು ಆ ಭಾಗದಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿತ್ತು. ಇಂತಹ ಹಾಳೆಯ ಮೇಲೆ ಹೆಚ್ಚಾಗಿ ವರ್ಣಚಿತ್ರಕಲೆಯನ್ನು ಚಿತ್ರಿಸಲಾಗುತ್ತದೆ.

ಸುಮಾರು 20 ವರ್ಷಗಳ ಹಿಂದೆ ಸರಕು ಸಾಗಾಣಿಕೆ ಹಡಗೊಂದರಲ್ಲಿ ಈಜಿಪ್ಟ್‌ನ ಮಹಮ್ಮದ್ ಹಸನ್ ಎಂಬುವವರು ಪರಿಚಯವಾದರು. ನಮ್ಮ ಪರಿಚಯದ ನೆನಪಿಗಾಗಿ ಪ್ಯಾಪಿರಸ್ ಮೇಲೆ ಚಿತ್ರಿಸಲಾದ ಈಜಿಪ್ಟ್ ವರ್ಣಚಿತ್ರಕಲೆಯನ್ನು ತನ್ನ ಹಸ್ತಾಕ್ಷರಗಳೊಂದಿಗೆ ನನಗೆ ನೀಡಿದ್ದರು. ಇದು 12 ಇಂಚು ಅಗಲ ಮತ್ತು 17 ಇಂಚು ಉದ್ದದ ‘ಪ್ಯಾಪಿರಸ್’ ಹಾಳೆಯ ಮೇಲೆ ಚಿತ್ರಿಸಲಾದ ವಿಂಟೇಜ್ ವರ್ಣಚಿತ್ರವಾಗಿದೆ.

ರಾಣಿ ಅಂಕೆಸೇನಾಮುನ್ (ANKHESENAMUN), ರಾಜ ಟುಟಾಂಕಾಮುನ್‌ಗೆ (TUTANKHAMUN) ಕಮಲ ಹೂಗಳ ಗೊಂಚಲನ್ನು ನೀಡುತ್ತಿರುವ ದೃಶ್ಯವನ್ನು ಇಲ್ಲಿ ಚಿತ್ರಿಸಲಾಗಿದೆ. ರಾಜ ಟುಟಾಂಕಾಮುನ್‌ನ ಸಮಾಧಿಯಲ್ಲಿದ್ದ ಒಡವೆ ಪೆಟ್ಟಿಗೆಯ ಮೇಲೂ ಈ ದೃಶ್ಯವಿದೆಯಂತೆ.

–ಜಿ. ನಾಗೇಂದ್ರ ಕಾವೂರು, ಸಂಡೂರು



# ಹಕ್ಕಿಗಳ ತಂತಿ ಗೂಡು

ಹಕ್ಕಿಗಳು ಹುಲ್ಲು ಹಾಗೂ ಸಣ್ಣಪುಟ್ಟ ಕಡ್ಡಿಗಳನ್ನು ತಂದು ಗೂಡು ಕಟ್ಟುವುದು ಸಾಮಾನ್ಯ. ಗೂಡು ಕಟ್ಟಲು ಅವು ಆಯ್ದುಕೊಳ್ಳುವ ಹುಲ್ಲು, ಸಣ್ಣಪುಟ್ಟ ಕಡ್ಡಿಗಳಲ್ಲೂ ಹೆಚ್ಚಿನ ಜಾಗ್ರತೆ ವಹಿಸುತ್ತವೆ. ಗೂಡು ಕಟ್ಟುವ ಸ್ಥಳವನ್ನೂ ಸೂಕ್ಷ್ಮವಾಗಿ ಆಯ್ಕೆ ಮಾಡಿಕೊಳ್ಳುತ್ತವೆ. ಆದರೆ, ಇಲ್ಲೊಂದು ಹಕ್ಕಿಯು ಬೇರೆ ಹಕ್ಕಿಗಳಿಗಿಂತ ಭಿನ್ನ. ಮನೆಯ ಅಂಗಳದಲ್ಲಿ 40–50 ಅಡಿ ಎತ್ತರದ ತೆಂಗಿನ ಮರವೊಂದಿದೆ. ಅದರಲ್ಲಿ ಹಕ್ಕಿಗಳು ಗೂಡು ಕಟ್ಟಿದ್ದವು. ಅವು ಮಧ್ಯಮ ಗಾತ್ರದಲ್ಲಿದ್ದವು. ಒಂದು ದಿನ ಗಾಳಿಯ ರಭಸಕ್ಕೆ ದೊಪ್ಪನೆ ಮರದ ಮೇಲಿಂದ ಏನೋ ಬಿತ್ತು. ಕೂಡಲೇ ಹೋಗಿ ನೋಡಿದ ನನಗೆ ಆಶ್ಚರ್ಯವಾಯಿತು. ಆ ಗೂಡು ಕಬ್ಬಿಣದ ತಂತಿಗಳಿಂದ ನಿರ್ಮಾಣಗೊಂಡಿತ್ತು. ಇದ್ಯಾವ ಹಕ್ಕಿಯ ಗೂಡು ಎಂದು ಹುಬ್ಬೇರಿಸಿದ್ದೂ ಆಯ್ತು. ಆ ಗೂಡಿನ ಮೇಲ್ಪದರ ಮಾತ್ರ ಬಿಡಿ ಬಿಡಿಯಾದ ತೆಂಗಿನ ನಾರಿನಿಂದ ಕೂಡಿತ್ತು. ಕೆಳಭಾಗವು ಕಬ್ಬಿಣದ ತಂತಿಗಳಿಂದ ನಿರ್ಮಾಣಗೊಂಡಿತ್ತು. ತಂತಿಗಳ ತೂಕ ಸುಮಾರು ಕಾಲು ಕೆ.ಜಿ.ಯಷ್ಟಿತ್ತು.

–ಜಯಪ್ರಕಾಶ ತಲವಾಟ, ಸಾಗರ